ಮುಳುಗಿ ಹೋಗುತ್ತಾರೋ ಹಾಗೆ ನನ್ನ ತಂದೆ ತಮ್ಮ ಪೀಳಿಗೆಗೆ ತಕ್ಕಹಾಗೆ ಪುಸ್ತಕಗಳಲ್ಲಿ ಮುಳುಗಿ ಹೋಗುತ್ತಿದ್ದರು. ಅವರು ಓದುವ ಕಾಲಕ್ಕೆ ಮಹಾರಾಜ ಕಾಲೇಜಿನಲ್ಲಿ ಮತ್ತು ಮಾನಸಗಂಗೋತ್ರಿಯಲ್ಲಿ ಸರ್ವಶ್ರೇಷ್ಠ ಬರಹಗಾರರು, ಚಿಂತಕರು ಇದ್ದರು. ತಂದೆಯವರು ಕುವೆಂಪು, ತ.ಸು. ಶಾಮರಾಯರು, ಜಿ.ಎಸ್. ಶಿವರುದ್ರಪ್ಪ ಅವರಂಥ ಘಟಾನುಘಟಿಗಳನ್ನು ನೋಡುತ್ತಾ ಓದಿದವರು. ಇವರೆಲ್ಲರ ಜೊತೆಗೆ ನಮ್ಮ ತಂದೆ ಗುಂಡಣ್ಣ ಎನ್ನುವ ಮೇಷ್ಟ್ರನ್ನು ತುಂಬಾ ನೆನೆಯುತ್ತಿದ್ದರು. ಗುಂಡಣ್ಣನವರು ಕ್ಲಾಸಿನಲ್ಲಿ ಶೇಕ್ಸ್‌ಪಿಯರನ 'ಮ್ಯಾಕ್ಬೆತ್' ನಾಟಕ ಪಾಠಮಾಡುವಾಗ ಎಷ್ಟು ರೋಮಾಂಚನ ಅನುಭವಿಸಿ ಹೇಳಿಕೊಡುತ್ತಿದ್ದರು ಅಂದರೆ ಅವರ ಇಡೀ ಮೈ ಬೆವರಿನಿಂದ ತೊಯ್ದು ಹೋಗಿರುತ್ತಿತ್ತಂತೆ.

ನಮ್ಮ ತಂದೆಯ ವಿಶೇಷ ಎಂದರೆ ಆರೋಗ್ಯದ ಕಡೆ ಯಾವಾಗಲೂ ಗಮನ ಹರಿಸುತ್ತಿದ್ದರು. ಅವರು ಅಂಗಸಾಧನೆಯಲ್ಲಿ ಎತ್ತಿದ ಕೈ. ಅವರು ನಮ್ಮ ಅಜ್ಜಿ ಗಂಗಮ್ಮನವರಿಗೆ ದತ್ತು ಮಗನಾಗಿದ್ದರು. ತನ್ನ ಕಾಲಕ್ಕೆ ಓದು ಬರಹದಲ್ಲಿ ಸಾಕಷ್ಟು ಪರಿಣತಿ ಪಡೆದಿದ್ದರು. ನನ್ನ ತಂದೆಗೆ ಓದು ಹಾಗೂ ಸಾಹಿತ್ಯದ ಸಂಸ್ಕಾರ ಬರಲಿಕ್ಕೆ ನನ್ನ ಅಜ್ಜಿ ಸಾಕಷ್ಟು ಮಟ್ಟಿಗೆ ಕಾರಣರು.

ನನ್ನ ತಾಯಿ ದೇವೀರಮ್ಮ ನನ್ನ ತಂದೆಗಿಂತ ತುಂಬಾ ಭಿನ್ನ. ಅಮ್ಮನ ಊರು ನಂಜನಗೂಡಿನ ಸಮೀಪದ ಹದಿನಾಡು, ಅದು ನಂತರ 'ಹದಿನಾರು' ಎಂಬ ಹೆಸರು ಪಡೆದುಕೊಂಡಿತು. ಅಮ್ಮ ವಾಸ್ತವವಾದಿ. ನಮ್ಮದು ಐದು ಜನ ಮಕ್ಕಳ ಕುಟುಂಬ ಅಂತ ಹೇಳಿದೆನಲ್ಲ? ಆದರೂ ಯಾರಿಗೂ ಕೊರತೆ ಮಾಡದೆ ನನ್ನ ತಂದೆ ತಾಯಿ ಎಲ್ಲರನ್ನೂ ಬಹಳ ಆಸ್ಥೆಯಿಂದ ಓದಿಸಿದರು. ಅಜ್ಜಿಯ ಕಾಲಕ್ಕೇ ಅವರ ತಂದೆ ಮೈಸೂರಿಗೆ ಬಂದು ಪುಟ್ಟ ಹೋಟೆಲ್ ಉದ್ಯಮದಲ್ಲಿ ತೊಡಗಿಕೊಂಡಿದ್ದರು. ನಮ್ಮ ಜೊತೆಗೆ ಸಂಬಂಧಿಕರ ಮಕ್ಕಳು ಎಷ್ಟು ಜನ ಬಂದು ನಮ್ಮ ಮನೆಯಲ್ಲಿ ಇದ್ದರೂ ಅವರ ಓದು–ಬರಹ, ಊಟ ತಿಂಡಿಗೆ ಹಿರಿಯರು ಯಾರೂ ಹಿಂದೆ ಮುಂದೆ ನೋಡಿದವರಲ್ಲ. ನನಗಿಂತ ಮುಂಚೆ ಅಕ್ಕ ಅಣ್ಣ ಇದ್ದರು; ನಾನು ಮಧ್ಯದವಳು.

ಸಾಹಿತ್ಯದ ಬಗೆಗಿನ ರುಚಿ ಎಲ್ಲರಿಗೂ ತಕ್ಕಮಟ್ಟಿಗೆ ಇದ್ದರೂ ನನಗೊಬ್ಬಳಿಗೆ ಮಾತ್ರ ತುಂಬಾ ಉತ್ತೇಜನ ದೊರೆತ ಕಾರಣ ನಾನು ಸಂಪೂರ್ಣವಾಗಿ ಸಾಹಿತ್ಯದಲ್ಲಿ ತೊಡಗಿಸಿಕೊಂಡೆ.

ನನ್ನ ತಂದೆಗೆ ನಾನು ಬರವಣಿಗೆಯಲ್ಲಿ ತೊಡಗಿಸಿಕೊಂಡಿದ್ದೇನೆ ಎನ್ನುವ



> ನನ್ನ ತಿಳಿವಳಿಕೆಯ ಪರಿಧಿಯಲ್ಲಿ, ಆಗಿನ ನನ್ನ ತಯಾರಿಯಲ್ಲಿ ಬರೆದ ಪ್ರತಿ ಸಾಲೂ ಆಯಾ ಕಾಲಕ್ಕೆ ಸೇರಿದ್ದು.